ಓ.ಎಸ್. – 221–2013

ಡಿ. ಡಬ್ಲೂ – 1

<u>ಸಾಕ್ಷಿಯನ್ನು ದಿಃ 28.11.2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಟಿ.ಆರ್. ವಕೀಲರಿಂದ</u>

1. ನನ್ನ ತಂದೆಯ ಹೆಸರು ಮಂಜಯ್ಯ, ತಾಯಿಯ ಹೆಸರು ದ್ಯಾವಮ್ಮ, ಅವರು ಈ ದಾವೆಯ 1 ನೇ ಪ್ರತಿವಾದಿ ಎಂದರೆ ಸರಿ. ಬಂಗಾರಪ್ಪ ಮತ್ತು ಯೋಗರಾಜ್ ನನ್ನ ಖಾಸ ಸಹೋದರರು ಎಂದರೆ ಸರಿ. ಬಂಗಾರಪ್ಪ ಮತ್ತು ಯೋಗರಾಜ್ ಇಬ್ಬರು ಮೃತಪಟ್ಟಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ವಾದಿಯರು ನನ್ನ ಸಹೋದರ ಯೋಗರಾಜ್ ನ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ.

2. ನನ್ನ ತಂದೆ ಬದುಕಿದ್ದಾಗಲೇ ನಮ್ಮ ಕುಟುಂಬದಲ್ಲಿ ಜುಬಾನಿ ಹಿಸ್ಸೆ ಏರ್ಪಟ್ಟಿರುತ್ತದೆ ಎಂದರೆ ಸರಿ . ಸದರಿ ಜುಬಾನಿ ಹಿಸ್ಸೆಯು ದಿಃ23.07.1994 ರಲ್ಲಿ ಏರ್ಪಟ್ಟಿರುತ್ತದೆ ಎಂದರೆ ಸರಿ. ಸದರಿ ಹಿಸ್ಸೆಯ ಕಾಲಕ್ಕೆ ನಾನು ಮತ್ತು ನನ್ನ ಗಂಡ ಹಾಜರಿದ್ದೆವು. ಸದರಿ ಜುಬಾನಿ ಹಿಸ್ಸೆಯಲ್ಲಿ ನನಗೆ ಯಾವುದೇ ಹಿಸ್ಸೆಯನ್ನು ನಾನು ತೆಗೆದುಕೊಂಡಿರುವುದಿಲ್ಲ. ನನ್ನ ಮದುವೆಯ ಸಮಯದಲ್ಲಿ ಖರ್ಚು ವೆಚ್ಚ ವನ್ನು ಮಾಡಿ ಮದುವೆ ಮಾಡಿಕೊಟ್ಟ ಕಾರಣ ನಾನು ಹಿಸ್ಸೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ಜುಬಾನಿ ಹಿಸ್ಸೆಯು ಬರವಣಿಗೆ ಆಗಿರುತ್ತದೆ ಎಂದರೆ ಸರಿ. ಸದರಿ ಜುಬಾನಿ ಹಿಸ್ಸೆಯನ್ನು ಬರೆದವರು ಯಾರು ಎಂದು ನನಗೆ ನೆನಪಿಲ್ಲ.

3. ದಿಃ23.07.1994 ರ ಜುಬಾನಿ ಹಿಸ್ಸೆ ಪತ್ರವನ್ನು ಯಾರು ತಮ್ಮ ಬಳಿ ಇಟ್ಟುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬಹಳ ವರ್ಷಗಳಾಗಿರುವುದರಿಂದ ಯಾರ ಬಳಿ ಇದೆಯೋ ನನಗೆ

ಗೊತ್ತಿಲ್ಲ. ನನ್ನ ತಂದೆ ಜುಬಾನಿ ಹಿಸ್ಸೆ ಪತ್ರವನ್ನು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದಾರೆ ಎಂದರೆ ಇರಬಹುದು. ಹಿಸ್ಸೆ ಆದ ನಂತರ ನನ್ನ ತಂದೆ ತಾಯಿ ಸ್ವಲ್ಪ ದಿನಗಳ ಮಟ್ಟಿಗೆ ಯೋಗರಾಜ್ ರವರ ಬಳಿ ಇದ್ದರು. ಎಷ್ಟು ದಿನಗಳ ಕಾಲ ಯೋಗರಾಜ್ ರವರೊಂದಿಗೆ ಇದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನನ್ನ ತಂದೆತಾಯಿಯ ಯೋಗಕ್ಷೇಮವನ್ನು ಯೋಗರಾಜ್ ರವರೇ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾವು ನನ್ನ ತಂದೆ ತಾಯಿಯವರ ಯೋಗಕ್ಷೇಮವನ್ನು ನೋಡಿಕೊಂಡಿದ್ದೆವು ಎಂದು ನುಡಿಯುತ್ತಾರೆ.

4. ನನ್ನ ತಂದೆ ಆಸ್ಪತ್ರೆಗೆ ದಾಖಲಾದಾಗ ಅವರನ್ನು ನೋಡಿಕೊಳ್ಳಲು ಆಸ್ಪತ್ರೆಗೆ ನಾನು ಬಂದಿದ್ದೆ ಎಂದರೆ ಸರಿ. ಯೋಗರಾಜ್ ಜೀವಿತರಿದ್ದಾಗಲೇ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಉತ್ತರಕ್ರಿಯಾಧಿಗಳನ್ನು ಯೋಗರಾಜ್ ರವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿ ಯೋಗರಾಜ್ ರವರ ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಎಲ್ಲ ಕಡೆಯೂ ಇರುತ್ತಿದ್ದರು ಮತ್ತು ದೇವಸ್ಥಾನಗಳಿಗೂ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಅನಾರೋಗ್ಯವಿದ್ದಾಗ ಯೋಗರಾಜ್ ರ ಹೆಂಡತಿ ಮತ್ತು ಮಗ ಆರೈಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿಯ ಆರೈಕೆಯನ್ನು ನಾನೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ತಾಯಿಯ ಆರೈಕೆಯನ್ನು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

5. ನನ್ನ ತಾಯಿಗೆ ಚಿಕಿತ್ಸೆ ಕೊಡಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನನ್ನ ತಾಯಿ ಮೃತಪಟ್ಟಾಗ ಅವರ ಉತ್ತರಕ್ರಿಯಾಧಿಗಳನ್ನು ಯೋಗರಾಜ್ ರವರ ಮಗ ಅಭಿಷೇಕ್ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ನಮ್ಮ ಮನೆಯಲ್ಲಿ ಮೃತಪಟ್ಟ ಕಾರಣ ನನ್ನ ಗಂಡ ಎಲ್ಲ ಉತ್ತರಕ್ರಿಯಾಧಿಗಳನ್ನು ಮಾಡಿರುತ್ತಾರೆ .ನನ್ನ ತಾಯಿ ಮೃತಪಟ್ಟ ನಂತರ ವಿಷಯವನ್ನು ವಾದಿಯರಿಗೆ ತಿಳಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಉತ್ತರಕ್ರಿಯಾಧಿಗಳನ್ನು ವಾದಿಯ ಮನೆಯಲ್ಲಿ ಮಾಡಿಲಾಗಿದೆ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ಮಾಡಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. ನನ್ನ ತಾಯಿ ಹೊರಗಡೆ ಹೋಗುವಾಗ ಅವರಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅವರ ಬ್ಯಾಗಿನಲ್ಲಿಯೇ ಇಟ್ಟುಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಮೊದಲು ಬ್ಯಾಗಿನಲ್ಲಿ ಇಟ್ಟುಕೊಳ್ಳುತ್ತಿದ್ದರು ಎಂದು ಉತ್ತರಿಸಿ ನಂತರ ಅವರ ದಾಖಲೆಗಳನ್ನು ಎಲ್ಲಿ ಇಟ್ಟುಕೊಳ್ಳುತ್ತಿದ್ದರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ನನ್ನ ತಾಯಿಯೇ ಇಟ್ಟುಕೊಂಡಿದ್ದರು ಎಂದರೆ ಸರಿ. ಜುಬಾನಿ ಹಿಸ್ಸೆಯ ಕಾಲಕ್ಕೆ ಯೋಗರಾಜ್ ರವರಿಗೆ 1 ಎಕರೆ 20 ಗುಂಟೆ, ಬಂಗಾರಪ್ಪರವರಿಗೆ 1 ಎಕರೆ 20 ಗುಂಟೆ, ನನ್ನ ತಂದೆ ತಾಯಿಯ ಪಾಲಿಗೆ 1 ಎಕರೆ 20 ಗುಂಟೆ ಎಂದು ವಿಭಜನೆ ಮಾಡಿಕೊಂಡಿದ್ದರು ಎಂದರೆ ಸರಿ.

7. ಹಿಸ್ಸೆಯ ಕಾಲದಲ್ಲಿ ನನ್ನ ತಂದೆ ತಾಯಿಯನ್ನು ಯೋಗರಾಜ್ ರವರೇ ನೋಡಿಕೊಳ್ಳಬೇಕು ಮತ್ತು ನನ್ನ ತಂದೆ ತಾಯಿ ಮೃತಪಟ್ಟ ನಂತರ ಅವರ ಪಾಲಿನ 1 ಎಕರೆ ಸ್ವತ್ತು ಯೊೀಗರಾಜ್ ರವರಿಗೆ ಹೋಗಬೇಕು ಎಂದು ಬರವಣಿಗೆ ಆಗಿತ್ತು ಎಂದರೆ ಇರಬಹುದು. ಯೋಗರಾಜ್ ರವರು ದಿಃ21.01.2003 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ . ಯೋಗರಾಜ್ ಮೃತಪಟ್ಟ ನಂತರ ನನ್ನ ತಂದೆ ತಾಯಿಯನ್ನು ವಾದಿಯರೇ ನೋಡಿಕೊಂಡಿರತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಮ್ಮ ಮೃತಪಟ್ಟ ನಂತರ ನನ್ನ ತಾಯಿ ಅವರೊಂದಿಗೆ ಇರುತ್ತಿರಲಿಲ್ಲ ಎಂದು ನುಡಿಯುತ್ತಾರೆ.

8. ಮಕ್ಕಳು ಮತ್ತು ಗಂಡ ಮೃತಪಟ್ಟ ನಂತರ 2005-2006 ರಲ್ಲಿ ನನ್ನ ತಾಯಿಯ ಮಾನಸಿಕ ಸ್ಥಿತಿ ಸರಿಯಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಪಾರ್ಶ್ವ ವಾಯು ಯಾವಾಗ ಆಯಿತು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಪಾರ್ಶ್ವ ವಾದ ನಂತರ 6 ವರ್ಷಗಳ ಕಾಲ ನನ್ನ ತಾಯಿ ನನ್ನೊಂದಿಗೆ ಇದ್ದರು ಎಂದು ನುಡಿಯುತ್ತಾರೆ. ಪಾರ್ಶ್ವ ವಾದ ನನ್ನ ತಾಯಿಯನ್ನು ವಾದಿಯರೇ ನೋಡಿಕೊಂಡಿದ್ದರು, ನಾನು ನೋಡಿಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆಗಾಗಾ ನಾನು ವಾದಿಯರ ಮನೆಗೆ ಬಂದು ನನ್ನ ತಾಯಿಯ ಯೋಗಕ್ಷೇಮ ವನ್ನು ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯ ಚಿಕಿತ್ಸಾ ವೆಚ್ಚ ಮತ್ತು ಉತ್ತರಕ್ರಿಯಾಧಿಗಳ ವೆಚ್ಚಗಳನ್ನು ವಾದಿಯರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

9. ನಾನು ಮತ್ತು ನನ್ನ ತಾಯಿ ಇಬ್ಬರು ಸೇರಿ ದಾವಾ ಸ್ವತ್ತನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿಯು ನನ್ನ ತಾಯಿಯೇ ನನ್ನ ಜೀವನಕ್ಕೆ ಹಣ ಬೇಕಿದೆ ಎಂದು ಮಾರಾಟ ಮಾಡಿದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮಾರಾಟದ ಸಮಯದಲ್ಲಿ ಉಪ ನೋಂದಾಣಿಧಿಕಾರಿಗಳ ಕಚೇರಿಯಲ್ಲಿ ನಾನು ಸಹ ಹಾಜರಿದ್ದೆ ಎಂದರೆ ಸರಿ. ದಾವಾ ಸ್ವತ್ತನ್ನು ಮಾರಾಟ ಮಾಡುವ ವಿಷಯವನ್ನು ವಾದಿಯರಿಗೆ ನನ್ನ ತಾಯಿ ತಿಳಿಸಿದ್ದರು, ವಾದಿಯರು ನೀವು ಯಾರಿಗಾದರೂ ಮಾರಾಟ ಮಾಡಿ ಎಲ್ಲಿಗಾದರೂ ಹೋಗಿ ಎಂದು ನನ್ನ ತಾಯಿಗೆ ವಾದಿಯರು ತಿಳಿಸಿದ್ದರು. ನನ್ನ ತಾಯಿ ವಾದಿಯರಿಗೆ ದಾವಾ ಸ್ವತ್ತಿನ ಮಾರಾಟದ ವಿಷಯವನ್ನು ತಿಳಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

10. ದಾವಾ ಸ್ವತ್ತಿನ ಮಾರಾಟದ ಹಣವನ್ನು ನನ್ನ ತಾಯಿಯಿಂದ ನಾವೇ ತೆಗೆದು ಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುರೆದು ನನ್ನ ತಾಯಿ ಅವರ ಖರ್ಚಿ ಗಾಗಿ ಆ ಹಣವನ್ನು ನಮಗೆ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಅವರ ಖರ್ಚು ವೆಚ್ಚದ ಲೆಕ್ಕ ಪತ್ರವನ್ನು ನಾವು ಬರೆದಿರುವುದಿಲ್ಲ. ವಾದಿಯರಿಗೆ ಆಸ್ತಿ ಸಿಗಬಾರದು ಎಂಬ ಉದ್ದೇಶದಿಂದ ದಾವಾ ಸ್ವತ್ತನ್ನು ನನ್ನ ತಾಯಿಯ ಕಡೆಯಿಂದ ಮಾರಾಟ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರಾಟದ ಖರೀದಿ ಮೊತ್ತವನ್ನು ನಾನೇ ತೆಗೆದುಕೊಂಡಿದ್ದರು, ತೆಗೆದುಕೊಂಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ